ಬೆಂಗಳೂರು ನಗರ ಜಿಲ್ಲಾಪಂಚಾಯತ್
ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ ಬೆಂಗಳೂರು ದಕ್ಷಿಣ ವಲಯ-3 ಬಿ.ಟಿ.ಎಂಬಡಾವಣೆ 1ನೇ ಹಂತ
ಬೆಂಗಳೂರು-560 029.

ಸಂಖ್ಯೆ: ಅನು-1 ಶಿಕ್ಷಣ ಹಕ್ಕು ಅಧಿ ನಿಯಮ 01/2012-13 ದಿನಾಂಕ:02/11/2012.

ಜ್ಞಾಪನ:

ವಿಷಯ:- ಮಕ್ಕಳ ಶಿಕ್ಷಣ ಹಕ್ಕು ಕಾಯ್ದೆ 2009 ರನ್ವಯ ಅಸ್ತಿತ್ವದಲ್ಲಿರುವ ಖಾಸಗಿ ಅನುದಾನಿತ ಮತ್ತು ಅನುದಾನ ರಹಿತ ಶಾಲೆಗಳು ಆರ್.ಟಿ.ಇ. ಅನ್ವಯ ಆನ್ ಲೈನ್ ಮೂಲಕ ಶಾಲಾ ಮಾನ್ಯತೆಯನ್ನು ಪಡೆದುಕೊಳ್ಳುವ ಬಗ್ಗೆ.

ಉಲ್ಲೇಖ: ನಿರ್ದೇಶಕರು (ಪ್ರಾಥಮಿಕ ಶಿಕ್ಷಣ ) ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ರವರ ಪತ್ರ ಸಂಖ್ಯೆ: ಇ- ಆಡಳಿತ ಘಟಕ ಆರ್.ಟಿ.ಇ. 01/2012-13 ದಿನಾಂಕ:31/8/2012.
2.ಮಾನ್ಯ ಆಯುಕ್ತರು ಸಾ.ಶಿ.ಇ. ಬೆಂಗಳೂರು -I ರವರ ಸುತ್ತೋಲೆ ಪತ್ರದ ಅನ್ವಯ.

--------

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಕರ್ನಾಟಕ ರಾಜ್ಯ ಪತ್ರ ಮಕ್ಕಳ ಶಿಕ್ಷಣ ಹಕ್ಕು ಕಾಯ್ದೆ 2009 ರ ಹಾಗೂ ನಿಯಮಗಳ ಅಧಿಸೂಚನೆ ಉಪಕಂಡಿಕೆ 12(1) (ಸಿ) ಯನ್ನು ಜಾರಿಗೆ ತಂದಿರುವ ನಿಟ್ಟಿನಲ್ಲಿ ಎಲ್ಲಾ ಖಾಸಗಿ ಅನುದಾನಿತ / ಅನುದಾನ ರಹಿತ ಶಿಕ್ಷಣ ಸಂಸ್ಥೆಗಳು ರಾಜ್ಯ ಪಠ್ಯ ಕ್ರಮ, ಕೇಂದ್ರ ಪಠ್ಯ ಕ್ರಮ, ಮತ್ತು ಅಂತರ ರಾಷ್ಟ್ರೀಯ ಪಠ್ಯಕ್ರಮ ಬೋಧಿಸುತ್ತಿರುವ ಎಲ್ಲಾ ಶಾಲೆಗಳಲ್ಲಿನ ಶೇ.25 ರಷ್ಟು ಸ್ಥಾನಗಳನ್ನು ಸರ್ಕಾರಿ ಆದೇಶದನ್ವಯ ತುಂಬ ಬೇಕಾಗಿದೆ ಅದರಂತೆ, ರಾಜ್ಯದಲ್ಲಿ ಅಸ್ಥಿತ್ವದಲ್ಲಿರುವ ಎಲ್ಲಾ ಖಾಸಗಿ ಶಾಲೆಗಳು (ಆರ್.ಟಿ.ಇ) ಮಕ್ಕಳ ಶಿಕ್ಷಣ ಹಕ್ಕು ಕಾಯ್ದೆ 2009 ರನ್ವಯ ಶಾಲಾ ನೊಂದಣೆ ಪಡೆಯಬೇಕಾಗಿದೆ.

ಅದರಂತೆ, ಮಕ್ಕಳ ಶಿಕ್ಷಣ ಹಕ್ಕು ಕಾಯ್ದೆಯ ನಿಯಮ-2012 ಜಾರಿ ಬಂದ ದಿನಾಂಕ:28/4/2012 ರಿಂದ 06 ತಿಂಗಳ ಒಳಗಾಗಿ ಎಲ್ಲಾ ಖಾಸಗಿ ಶಾಲೆಗಳು ಮಕ್ಕಳ ಶಿಕ್ಷಣ ಹಕ್ಕು ಕಾಯ್ದೆ 2009 ರನ್ವಯ ಶಾಲೆಯ ನೋಂದಣೆ ಯನ್ನು ನಮೂನೆ-I ರ ವೆಬ್ ಸೈಟನಲ್ಲಿ (http://Schooleducation kar.nic.in)SchoolRegistration-RTEActಎಂಬ ಶೀರ್ಷಿಕೆಯಡಿಯಲ್ಲಿರುವ ತಂತ್ರಾಂಶದಲ್ಲಿ ದಾಖಲಿಸಿ ಹಾರ್ಡ್ ಕಾಪಿಯನ್ನು ಈ ಕಛೇರಿಗೆ ಒಂದು ವಾರದ ಒಳಗಾಗಿ ಸಲ್ಲಿಸಲು ತಿಳಿಸಲಾಗಿತ್ತು.

ಆದರೆ ಇದುವರೆವಿಗೂ ನಿಮ್ಮ ಶಾಲೆಯಿಂದ ತಂತ್ರಾಂಶದಲ್ಲಿ ದಾಖಲಿಸಿರುವ ಬಗ್ಗೆ ಮಾಹಿತಿಯನ್ನು ಒದಗಿಸಿರುವುದಿಲ್ಲ. ಉಲ್ಲೇಖ-2 ರ ಸೂಚನೆಯಂತೆ ದಿನಾಂಕ: 30/11/2012 ಅಂತಿಮ ದಿನಾಂಕವಾಗಿರುವುದರಿಂದ ಆ ದಿನಾಂಕದ ಒಳಗಾಗಿ ಸಲ್ಲಿಸಲು ಅಂತಿಮವಾಗಿ ತಿಳಿಸಿದೆ. ತಪ್ಪಿದ್ದಲ್ಲಿ ಶಿಕ್ಷಣ ಕಾಯ್ದೆ ಅನ್ವಯ ಕ್ರಮ ಜರುಗಿಸಲು ಮೇಲಾಧಿಕಾರಿಗಳಿಗೆ ವರದಿಯನ್ನು ಮಾಡಲಾಗುವುದು.

ಕ್ಷೇತ್ರ ಶಿಕ್ಷಣಾಧಿಕಾರಿಗಳು
ಬೆಂಗಳೂರು ದಕ್ಷಿಣ ವಲಯ-3.

ಗೆ
515 Army School
Halasuru

ಈ ವಲಯದ ಎಲ್ಲಾ ಅನುದಾನಿತ ಮತ್ತು ಅನುದಾನ ರಹಿತ ಪ್ರಾಥಮಿಕ ಶಾಲೆಗಳ ಮುಖ್ಯಸ್ಥರಿಗೆ ಮುಂದಿನ ಕ್ರಮಕ್ಕಾಗಿ
2.ಈ ವಲಯದ ಎಲ್ಲಾ ಸಿ.ಆರ್.ಪಿ.ಗಳಿಗೆ ಮಾಹಿತಿಗಾಗಿ ಮತ್ತು ಮುಂದಿನ ಕ್ರಮಕ್ಕಾಗಿ
3.ಕಛೇರಿ ಪ್ರತಿ.

17/11/12
PRINCIPAL

TAMIL SELVI. A
PRINCIPAL
515 Army Base Workshop
High School
Halasuru, Bangalore-8.

Secretary
515 Army Base Wksp
Unit School